**ಓ ಎಸ್ 97/2025 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 14.01.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್ ಡಿ ಎಲ್ ವಕೀಲರಿಂದಃ**

ನೋಂದಾಯಿತವಲ್ಲದ ಪಂಚಾಯಿತಿ ಪಾಲುಪಟ್ಟಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಶಾನೆ ಪಿ 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ**

ನಾನು 7 ನೇ ತರಗತಿ ಓದಿದ್ದೇನೆ. ನನಗೆ 10 ವರ್ಷಗಳಿಂದ ಆರೋಗ್ಯ ಸರಿ ಇಲ್ಲ. ನಾನು ಅನಾರೋಗ್ಯಪೀಡಿತನಾದ ನಂತರ ನನ್ನನ್ನು ನಮ್ಮ ಚಿಕ್ಕಪ್ಪ ಮತ್ತು ಚಿಕ್ಕಮ್ಮ ನೋಡಿಕೊಳ್ಳುತ್ತಿದ್ದಾರೆ. ನಮ್ಮ ಚಿಕ್ಕಪ್ಪ ತೀರಿಕೊಂಡಿದ್ದು ನಮ್ಮ ಚಿಕ್ಕಮ್ಮನ ಹೆಸರು ಭಾಗ್ಯಮ್ಮ. ನಾನು ಹಾಗೂ ನನ್ನ ತಾಯಿ ರೇಣುಕಮ್ಮ ವಿಶ್ವಾಸದಿಂದ ಇಲ್ಲ. ನಮ್ಮ ಅಣ್ಣ ಅತ್ತಿಗೆ ಮತ್ತು ನಾನು ಸಹ ವಿಶ್ವಾಸದಿಂದ ಇಲ್ಲ. ನಮ್ಮ ತಂದೆಗೆ ಸಂಬಂಧಿಸಿದ ವಾಸದ ಮನೆ ಇದೆ ಎಂದರೆ ಸರಿ. ಅದರ ಅಳತೆ ಎಷ್ಟು ಇದೆ ಎಂದು ನನಗೆ ನೆನಪಿಲ್ಲ. ಆ ಮನೆಯಲ್ಲಿ ನಮ್ಮ ತಾಯಿ, ಅಣ್ಣ ಮತ್ತು ಅತ್ತಿಗೆ ವಾಸ ಇದ್ದಾರೆ. ಆ ಮನೆಯನ್ನು ಹೊರತುಪಡಿಸಿ ನಮ್ಮ ತಂದೆಯ 0.36 ಗುಂಟೆ ಜಮೀನು ಇದೆ. ಆ ಜಮೀನಿನ ಆರ್ ಟಿ ಸಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಮ್ಮ ತಂದೆ ಚಲುವಚಾರಿರವರ ಆರ್ ಟಿ ಸಿ ಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2013 ರಲ್ಲಿ ಆರ್ ಟಿ ಸಿ ನಮ್ಮ ತಂದೆ ಹೆಸರಿನಲ್ಲಿ ಇತ್ತು. ಈಗ ಆರ್ ಟಿ ಸಿ ನಮ್ಮ ಅಣ್ಣನ ಹೆಸರಿನಲ್ಲಿ ಇದೆ. ನನಗೆ ಮೋಸ ಮಾಡಿ ನಮ್ಮ ಅಣ್ಣ ಬರೆಸಿಕೊಂಡಿದ್ದಾರೆ. ಏನು ಪತ್ರ ಬರೆಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಪತ್ರದ ಸಂಗತಿಗಳನ್ನು ನಾನು ತಿಳಿದುಕೊಂಡಿಲ್ಲ. ದಾವಾ ಪತ್ರದಲ್ಲಿ ಇರುವ ಹೆಬ್ಬೆಟ್ಟಿನ ಗುರುತುಗಳು ನನ್ನವೇ ಆಗಿದ್ದು ನಮ್ಮ ತಂದೆಯ ಜಮೀನಿನಲ್ಲಿ ಭಾಗ ಬರಬೇಕೆಂದು ದಾವೆ ಹೂಡಿದ್ದೇನೆ. ದಾವಾ ಆಸ್ತಿಯು ನಮ್ಮ

ತಂದೆಯ ಆಸ್ತಿಯಾಗಿದ್ದು ಅದರಲ್ಲಿ ನನಗೆ ಭಾಗ ಬರಬೇಕು ಎಂದು ಹೇಳಿ ದಾವೆ ಹೂಡಿದ್ದೇನೆ. ನಮ್ಮ ಅಣ್ಣನ ಹೆಸರಿಗೆ ಆಗಿರುವ ಕಂದಾಯ ದಾಖಲೆಗಳನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ. 3 ನೇ ಪ್ರತಿವಾದಿಯು ನಮ್ಮ ಊರಿನವರೇ ಆಗಿದ್ದಾರೆ. ಅವರು ನನಗೆ ಗೊತ್ತು. ಅವರಿಗೆ ನಮ್ಮ ತಾಯಿ ಮತ್ತು ಅಣ್ಣ ಹಾಗೂ ಅತ್ತಿಗೆ ಕ್ರಯದ ಕರಾರು ಮಾಡಿಕೊಟ್ಟಿರುವ ವಿಷಯ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯು ನಮ್ಮ ತಾಯಿ ಮತ್ತು ಅಣ್ಣ ಹಾಗೂ ಅತ್ತಿಗೆ ಮೇಲೆ ದಾವೆ ಹೂಡಿದ್ದರು ಎಂದರೆ ಇರಬಹುದು. ಸದರಿ ದಾವೆಯ ಸಂಖ್ಯೆ 119/2021 ಎಂದರೆ ಸರಿ. ಜಮೀನನ್ನು ಬರೆದುಕೊಡಲು ಆದೇಶ ಮಾಡದೆ ಹಣವನ್ನು ಹಿಂತಿರುಗಿಸಲು ನ್ಯಾಯಾಲಯ ಆ ದಾವೆಯಲ್ಲಿ ಆದೇಶ ಮಾಡಿದೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿನ ಡಿಕ್ರಿಯ ವಿರುದ್ಧ 3 ನೇ ಪ್ರತಿವಾದಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಮೇಲ್ಮನವಿಯಲ್ಲಿ ದಾವಾ ಆಸ್ತಿಯನ್ನು 3 ನೇ ಪ್ರತಿವಾದಿ ಹೆಸರಿಗೆ ಕ್ರಯ ಮಾಡಿಕೊಡುವಂತೆ ಆದೇಶ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**